ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ ದಿನಾಂಕ : DATE : 02/04/2019

# ಜಾಧವ್ ರಾಜೀನಾಮೆ ಅಂಗೀಕಾರ

## 26 ದಿನಗಳ ಬಳಿಕ ಸ್ಪೀಕರ್ ತೀರ್ಪು | ಅನರ್ಹತೆಯಿಂದ ಪಾರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು 2/4/19

ಕಲಬುರಗಿ ಜಿಲ್ಲೆ ಚಿಂಚೋಳಿ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದ ಕಲಬುರಗಿ ಲೋಕಸಭೆ ಬಿಜೆಪಿ ಅಭ್ಯರ್ಥಿ ಡಾ. ಉಮೇಶ್ ಜಾಧವ್ ಅವರು ಶಾಸಕ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಸೋಮವಾರ ಅಂಗೀಕರಿಸಿದ್ದಾರೆ.



ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಉಮೇಶ್ ಜಾಧವ್ ಸದಸ್ಯತ್ವ ಅನರ್ಹಗೊಳಿಸುವಂತೆ ಕಾಂಗ್ರೆಸ್ ದೂರು ನೀಡಿತ್ತು. ದೂರಿನ ತೂಗುಕತ್ತಿ ನೆತ್ತಿ ಮೇಲೆ ತೂಗುತ್ತಿರುವಾಗಲೇ ಉಮೇಶ್ ಜಾಧವ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಸದಸ್ಯತ್ವ ಅನರ್ಹಗೊಳಿಸುವ ಮೊದಲೇ ರಾಜೀನಾಮೆ ಅಂಗೀಕರಿಸಿರುವುದರಿಂದ ಉಮೇಶ್ ಜಾಧವ್ ನಿರುಮ್ಮಳರಾಗಿದ್ದಾರೆ.

ಸತತವಾಗಿ ಪಕ್ಷದ ವಿಪ್ ಉಲ್ಲಂಘನೆ ಮಾಡಿ ಸಿಎಲ್‌ಪಿ ಸಭೆಗೂ ಗೈರು ಹಾಜರಾಗಿದ್ದ ಉಮೇಶ್ ಜಾಧವ್ ಬಿಜೆಪಿ ಜೊತೆ ಸಂಪರ್ಕ ಸಾಧಿಸಿದ್ದಾರೆ ಎಂಬ ಕಾರಣ ನೀಡಿ ಅವರ ಸದಸ್ಯತ್ವ ಅನರ್ಹಗೊಳಿಸುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪೀಕರ್ ಅವರಿಗೆ ದೂರು ಸಲ್ಲಿಸಿದ್ದರು. ಇದರ ಬೆನ್ನಲ್ಲೇ 2019ರ ಮಾ.4 ರಂದು ಉಮೇಶ್ ಜಾಧವ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದರು. ರಾಜೀನಾಮೆ ಸಲ್ಲಿಸಿದ 26 ದಿನಗಳ ಬಳಿಕ ಅಂಗೀಕಾರವಾಗಿದೆ. ಈ ಮೂಲಕ ಬಿಜೆಪಿ ಅಭ್ಯರ್ಥಿಯಾಗಿ ಲೋಕಸಭಾ ಕಣದಲ್ಲಿರುವ ಉಮೇಶ್ ಜಾಧವ್ ಹಾದಿ ಸುಗಮವಾಗಿದೆ. ಮಾ. 25ರ ಉಮೇಶ್ ಜಾಧವ್ ಬಹಿರಂಗ ವಿಚಾರಣೆ, ಕಾನೂನು ತಜ್ಞರೊಂದಿಗೆ ಸಮಾಲೋಚನೆ ಬಳಿಕ ಸ್ಪೀಕರ್ ರಮೇಶ್ ಕುಮಾರ್ ಏ.1 ರಂದು ತಮ್ಮ ಅಂತಿಮ ತೀರ್ಮಾನ ತಿಳಿಸಿದ್ದಾರೆ.

## 'ನೈತಿಕ ನಿಲುವುಗಳಿಗೆ ಕಾನೂನು ರಕ್ಷಣೆ ಕಷ್ಟ'

ಉಮೇಶ ಜಾಧವ ಅವರ ರಾಜೀನಾಮೆ ಬಗ್ಗೆ ತಾವು ನೀಡುತ್ತಿರುವ ತೀರ್ಪಿನ ಬಗ್ಗೆ ತುಸು ಅಸಮಾಧಾನ ತೋಡಿಕೊಂಡಿರುವ ಸ್ಪೀಕರ್ ಅವರು, 'ನ್ಯಾಯಿಕ ವ್ಯವಸ್ಥೆಯಲ್ಲಿ ತೀರ್ಪು ಹಾಗೂ ನ್ಯಾಯ ಬಹುತೇಕ ಸಂದರ್ಭಗಳಲ್ಲಿ ಒಟ್ಟಿಗೆ ಇರುವುದಿಲ್ಲ. ಸಂವಿಧಾನಿಕ ಸ್ಥಾನದಲ್ಲಿ ಇರುವಂತಹವರಿಗೆ ತೀರ್ಪು ಕೊಡುವ ಅಧಿಕಾರ ಇರುತ್ತದೆಯೇ ಹೊರತು ನ್ಯಾಯ ಸ್ಥಾಪನೆಗೆ ಅವಕಾಶ ಇರುವುದಿಲ್ಲ. ತೀರ್ಪು ಯಾವಾಗಲೂ ಸಾಕ್ಷ್ಯಾಧಾರಗಳನ್ನು ಅವಲಂಬಿಸಿರುತ್ತದೆ. ನೈತಿಕತೆಗೆ ಮತ್ತು ನೈತಿಕ ನಿಲುವುಗಳಿಗೆ ಕಾನೂನಾತ್ಮಕ ರಕ್ಷಣೆ ಸಿಗುವುದು ಬಹಳ ಕಷ್ಟದ ಕೆಲಸ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

## ಚಿಂಚೋಳಿ ಕ್ಷೇತ್ರ ಖಾಲಿ

ಸ್ಪೀಕರ್ ತೀರ್ಮಾನದ ಬೆನ್ನಲ್ಲೇ ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಉಮೇಶ್ ಜಾಧವ್ ಅವರ ರಾಜೀನಾಮೆ ಅಂಗೀಕರಿಸಿ ಅಧಿಸೂಚನೆ ಹೊರಡಿಸಿದ್ದಾರೆ. 15ನೇ ವಿಧಾನಸಭೆಗೆ ಚಿಂಚೋಳಿ ಕ್ಷೇತ್ರದಿಂದ ಆಯ್ಕೆಯಾಗಿದ್ದ ಉಮೇಶ್ ಜಾಧವ್ ಅವರ ರಾಜೀನಾಮೆ ಅಂಗೀಕಾರದಿಂದಾಗಿ ವಿಧಾನಸಭೆಯ ಒಂದು ಸ್ಥಾನ ತೆರವಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.